

# ಶಾಂತಿದೂತ ಹೇಳಿದ ಶಾಂತಿ ನೆಲೆಸಬೇಕು




ಅಹಿಂಸೆ ಮೂಲಕ ಯಾರನ್ನು ಬೇಕಾದರೂ ಗೆಲ್ಲಬಹುದೆಂದು ಜಗತ್ತಿಗೆ ತೋರಿಸಿಕೊಟ್ಟ ವ್ಯಕ್ತಿ ಮಹಾತ್ಮ ಗಾಂಧಿ. ಆ ಪುಣ್ಯಾತ್ಮ ಹೇಳಿದ ಶಾಂತಿ ತತ್ವವು ಹುಟ್ಟಿನಿಂದಲೇ ನಮ್ಮೆಲ್ಲರ ಬದುಕಿನಲ್ಲಿ ನೆಲೆಗೊಳ್ಳಬೇಕಾದ ಬಹುಮುಖ್ಯ ಅಂಶ ಅನ್ನೋದು ಅವರ ಬರಹಗಳಿಂದ ನಾನು ಕಲಿತ ಪಾಠ. ನನಗೆ ಅವರು ಶಾಂತಿದೂತನಾಗಷ್ಟೇ ಕಾಣುವುದಿಲ್ಲ. ಯಾವುದೇ ಅಡೆತಡೆಗಳು ಬಂದರೂ ವಿಚಲಿತರಾಗದೆ, ಧೃತಿಗೆಡದೆ ಗುರಿಯ ಕಡೆಗೆ ಹೇಗೆ ಸಾಗಬೇಕೆಂದು ಸಾರಿದ ಆದರ್ಶವ್ಯಕ್ತಿಯಾಗಿಯೂ ಕಾಣುತ್ತಾರೆ.

ಗಾಂಧಿ ಒಬ್ಬ ವ್ಯಕ್ತಿ ಅಲ್ಲ. ಅವರೆಂದರೆ, ಅಗಾಧ ಶಕ್ತಿ. ಮಾನವೀಯ ಮೌಲ್ಯಗಳ ಮೂಲಕವೇ ಜನರನ್ನು ಜಾಗೃತಗೊಳಿಸಿದ ಮಹಾನ್ ಚೇತನ. ಅಹಿಂಸಾ ತತ್ವದ ಮೂಲಕ ವೈರಿಗಳನ್ನು ಹೇಗೆ ಶರಣಾಗಿಸಬೇಕು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ದಂತಕಥೆ. ಎಲ್ಲ ಕಾಲಕ್ಕೂ ಪ್ರಸ್ತುತವಾಗಲೇಬೇಕಾದ ಅಂತಹ ಮಹಾನ್ ವ್ಯಕ್ತಿಯ ಬದುಕಿನ ಪಯಣವು ದಿನೇ ದಿನೇ ನಮ್ಮ ಯುವ ಪೀಳಿಗೆಯಿಂದ ದೂರ ಸರಿಯುತ್ತಿರುವುದು ವಿಪರ್ಯಾಸದ ಸಂಗತಿ.

ನಮ್ಮ ನಡುವೆ ಧರ್ಮದ ಹೆಸರಿನಲ್ಲಿ ಅಶಾಂತಿ ನೆಲೆಸಿದೆ. ಧರ್ಮವನ್ನು ರಾಜಕಾರಣಕ್ಕೆ ಬಳಸಿಕೊಳ್ಳುವ ಪ್ರವೃತ್ತಿ ದಿನೇ ದಿನೇ ಹೆಚ್ಚಾಗುತ್ತಿದೆ. ಬೇಡಿಕೆಯನ್ನು ಈಡೇರಿಸಿಕೊಳ್ಳಲು ಹೋರಾಟದ ಹಾದಿ ತುಳಿಯಬೇಕು ಎಂಬುದನ್ನು ತೋರಿಸಿಕೊಟ್ಟ ಗಾಂಧಿವಾದವನ್ನು ಬೇರೆಯದ್ದೇ ರೀತಿಯಲ್ಲಿ ಅರ್ಥೈಸಿಕೊಂಡು ಹೋರಾಟಗಳನ್ನು ರಾಜಕೀಯ ದುರುದ್ದೇಶದಿಂದ, ಹಿಂಸೆಗೆ ತಿರುಗಿಸುತ್ತಿರುವುದು ದುರಂತವೇ ಸರಿ.

ಗಾಂಧಿವಾದ ಯಾವತ್ತಿಗೂ ಪ್ರಸ್ತುತ. ಈ ಬಗ್ಗೆ ಯಾವುದೇ ಸಂಶಯವಿಲ್ಲ. ವಿಶ್ವದ ಎಲ್ಲೆಡೆ ಅಶಾಂತಿ ತಾಂಡವವಾಡುತ್ತಿರುವ ಈ ಹೊತ್ತಿನಲ್ಲಿ ಗಾಂಧೀಜಿಯವರ ತತ್ವಗಳು ರಾಜಕೀಯ ನಾಯಕರಿಗೆ ಕೇವಲ ಭಾಷಣದ ಸರಕಾಗಿವೆ. ಸಮಾಜ ಸುಧಾರಣೆಯಾಗಬೇಕಾದರೆ ಗಾಂಧಿ ತತ್ವಗಳು ಬೇಕೆಬೇಕು. ಸಮಾಜದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅನಾಚಾರಗಳನ್ನು ಮೆಟ್ಟಿ ನಿಲ್ಲುವ ಸಲುವಾಗಿ ಈಗಿನ ಯುವ ಸಮುದಾಯಕ್ಕೆ ಗಾಂಧೀಜಿಯವರ ತತ್ವಗಳ ಅನಿವಾರ್ಯತೆ ಇದ್ದೇ ಇದೆ. ಅವರ ಬರಹಗಳನ್ನು ಓದಿ, ಮೈಗೂಡಿಸಿಕೊಳ್ಳಬೇಕಾದ ಜವಾಬ್ದಾರಿ ಇಂದಿನ ಯುವಪೀಳಿಗೆಗೆ ಇದೆ.

–ಸ್ವಪ್ನ ಟಿ.ಎಂ., ವಿದ್ಯಾರ್ಥಿನಿ,
ಪ್ರಥಮ ದರ್ಜೆ ಬಾಲಕರ ಕಾಲೇಜು, ಕೋಲಾರ



## ಇತಿಹಾಸಕ್ಕಷ್ಟೇ ಸೀಮಿತವಲ್ಲ...



ಗಾಂಧೀಜಿ ಅವರ ತತ್ವಗಳು ಇಂದಿಗೂ ನಮ್ಮ ಜೀವನಕ್ಕೆ, ಸಮಾಜಕ್ಕೆ ದಾರಿದೀಪಗಳು. ಸ್ವಾತಂತ್ರ್ಯದ ಹೋರಾಟದಲ್ಲಿ ಅವರು ಹಿಡಿದ ಅಹಿಂಸಾ ಮತ್ತು ಸತ್ಯದ ಮಾರ್ಗ, ಮನುಷ್ಯ ಮನುಷ್ಯರ ನಡುವೆ, ದೇಶ ದೇಶಗಳ ನಡುವೆ ಸಂಘರ್ಷದ ಬೆಂಕಿಯನ್ನು ಶಮನಗೊಳಿಸಲು ಈಗಲೂ ಪ್ರಬಲ ಅಸ್ತ್ರವೇ.

ನಮ್ಮ ದೈನಂದಿನ ಬದುಕಿನಲ್ಲಿ ಶಾಂತಿ, ಅಹಿಂಸೆ ಮತ್ತು ಸತ್ಯದ ಮಂತ್ರವನ್ನು ಅಳವಡಿಸಿಕೊಂಡರೂ ದೇಶದ ಬೆಳವಣಿಗೆಗೆ ಅದೇ ನಮ್ಮ ಕೊಡುಗೆ. ಗಾಂಧಿವಾದ ಎಂದಾಕ್ಷಣ ಅದನ್ನು ಎತ್ತರಕ್ಕೆಟ್ಟು ಹೊಗಳುವುದು ಮಾತ್ರವಲ್ಲ, ಅದನ್ನು ಅನುಸರಿಸುವ ಕೆಲಸ ಆಗಬೇಕಿದೆ. ಅವರ ತತ್ವಗಳು ಇತಿಹಾಸಕ್ಕಷ್ಟೇ ಸೀಮಿತವಾಗದೆ, ಇಂದಿನ ಪೀಳಿಗೆಗೆ ಪ್ರೇರಣೆ ಆಗಬೇಕಿದೆ. ನಿಜವಾದ ಗೌರವವೆಂದರೆ ಅವರ ಆದರ್ಶಗಳನ್ನು ಕ್ರಿಯೆಯಲ್ಲಿ ತೋರಿಸುವುದು.

ನಮ್ಮ ಸಮಾಜದಲ್ಲಿ ಅಹಿಂಸೆಯ ಮೌಲ್ಯ ಹೆಚ್ಚಿದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯ. ಭ್ರಷ್ಟಾಚಾರ, ಹಿಂಸೆ, ಅನ್ಯಾಯಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಗಾಂಧಿ ತತ್ವಗಳಷ್ಟೇ ಪರಿಹಾರ ನೀಡಬಲ್ಲವು.

–ಕಿತ್ತ ಡಿ ಕಿರಣ್, ಯೂಟ್ಯೂಬರ್

ಕಲೆ: ಎಂ.ಎಸ್. ಮೂರ್ತಿ